ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 25-01-1970.

## *<u>ಸ್ಮೃತಿ ಚಿಹ್ನೆಯನ್ನು ಶಾಶ್ವತ ಮಾಡಿಕೊಳ್ಳುವ ವಿಧಿ</u>* (यादगार कायम करने की विधि)

ಅವ್ಯಕ್ತ ಸ್ಥಿತಿಯೇ ಮುಖ್ಯ ವಿಷಯವಾಗಿದೆ. ವ್ಯಕ್ತದಲ್ಲಿರುತ್ತಾ, ಕರ್ಮ ಮಾಡುತ್ತಾ ಅವ್ಯಕ್ತ ಸ್ಥಿತಿ ಇರಲಿ. ಈ ವಿಷಯದಲ್ಲಿ ಪಾಸಾಗಬೇಕು. ತಮ್ಮ ಬುದ್ಧಿಯ ಮಾರ್ಗವನ್ನು ಸ್ಪಷ್ಟವಾಗಿ ಇಟ್ಟುಕೊಳ್ಳಬೇಕು. ಮಾರ್ಗ ಸ್ಪಷ್ಟವಾಗಿದ್ದಾಗ ಬೇಗನೆ ಓಡಿಹೋಗಿ ಗುರಿಯನ್ನು ತಲುಪಬಲ್ಲಿರಿ. ಪುರುಷಾರ್ಥದ ಮಾರ್ಗದಲ್ಲಿ ಯಾವುದೇ ಅಡಚಣೆಗಳಿದ್ದರೆ ಅವುಗಳನ್ನು ದೂರ ಮಾಡಿ ಮಾರ್ಗವನ್ನು ಸ್ಪಷ್ಟ ಮಾಡುವ ಸಾಧನದಿಂದಲೇ ಅವ್ಯಕ್ತ ಸ್ಥಿತಿಯನ್ನು ಪಡೆಯಬಹುದು. ಮಧುಬನಕ್ಕೆ ಬಂದು ಯಾವುದಾದರೂ ವಿಶೇಷ ಗುಣವನ್ನು ಎಲ್ಲರಿಗೂ ಕೊಡುವುದೇ ಸ್ಮೃತಿಚಿಹ್ನೆ ಆಗಿದೆ. ಅಲ್ಲಿದೆ ಜಡ ಸ್ಮೃತಿಚಿಹ್ನೆ, ಆದರೆ ಸದಾ ನೆನಪು ಮಾಡುವಂತಹ ತಮ್ಮ ಗುಣದ ನೆನಪು ಕೊಡುವುದು ಚೈತನ್ಯ ಸ್ಮೃತಿಚಿಹ್ನೆಯಾಗಿದೆ. ಎಂದಾದರೂ, ಎಲ್ಲಿಗಾದರೂ ಹೋದಲ್ಲಿ ತಮ್ಮ ಸ್ಮೃತಿಚಿಹ್ನೆ ಕಾಯಂ ಮಾಡುವ ಗುರಿಯನ್ನಿಟ್ಟುಕೊಳ್ಳಿ. ಇಲ್ಲಿಂದ ವಿಶೇಷ ಸ್ನೇಹವನ್ನು ತಮ್ಮಲ್ಲಿ ತುಂಬಿಕೊಂಡು ಹೋದಾಗ ಈ ಸ್ನೇಹವು ಕಲ್ಲನ್ನೂ ಕರಗಿಸುತ್ತದೆ. ಈ ಆತ್ಮಿಕ ಸ್ನೇಹದ ಕೊಡುಗೆಯನ್ನು ಜೊತೆಗೆ ತೆಗೆದುಕೊಂಡು ಹೋಗಿ, ಅದರಿಂದ ಯಾರ ಮೇಲಾದರೂ ವಿಜಯವನ್ನು ಪಡೆಯಬಹುದು. ಸಮಯ ಹೆಚ್ಚಿಗಿದೆ ಎಂದು ತಿಳಿಯುತ್ತೀರೋ ಅಥವಾ ಕಡಿಮೆ ಇದೆಯೆಂದೋ? ಈಗಂತೂ ಕಡಿಮೆ ಸಮಯದಲ್ಲಿ 100% ಪ್ರತಿಶತದ ವರೆಗೆ ತಲುಪುವ ಪ್ರಯತ್ನ ಮಾಡಬೇಕಾಗಿದೆ. ತಮ್ಮಲ್ಲಿರುವಷ್ಟು ಸಾಹಸವನ್ನು ಪೂರ್ಣ ತೊಡಗಿಸಿರಿ, ಒಂದು ಕ್ಷಣದಷ್ಟು ವ್ಯರ್ಥವಾಗಬಾರದೆಂದು ಗಮನವಿರಲಿ, ಸಂಗಮದ ಒಂದು ಕ್ಷಣ ಎಷ್ಟು ದೊಡ್ಡದಾಗಿದೆ. ತಮ್ಮ ಸಮಯ, ಸಂಕಲ್ಪ ಎರಡನ್ನೂ ಸಫಲ ಮಾಡಿಕೊಳ್ಳಬೇಕು. ಯಾವ ಕಾರ್ಯವನ್ನು ದೊಡ್ಡವರು ಮಾಡಲಾಗಲಿಲ್ಲವೋ ಅದನ್ನು ಚಿಕ್ಕವರು ಮಾಡಲು ಸಾಧ್ಯವಿದೆ. ಈಗ ಇನ್ನೂ ಆ ಕಾರ್ಯ ಉಳಿದಿದೆ. ಇಲ್ಲಿಯವರೆಗಿನ ಓಟ ಮುಗಿಯಿತು ಆದರೆ ಈಗ ಗುರಿಯನ್ನು ತಲುಪಲು ಜಿಗಿತ ಬೇಕು. ಜಿಗಿತದಿಂದ ಕ್ಷಣದಲ್ಲಿ ಬಹಳ ಮಾತುಗಳ ಪರಿವರ್ತನೆಯಾಗುತ್ತದೆ. ಇಷ್ಟು ಸಾಹಸವಿದೆಯೇ? ಏನೆಲ್ಲಾ ಕೇಳಿರುವಿರೋ ಅವುಗಳನ್ನು ಜೀವನದಲ್ಲಿ ತಂದು ತೋರಿಸಿ. ಯಾರೊಂದಿಗೆ ಸ್ನೇಹವಿರುತ್ತದೆಯೋ ಅವರಂತೆ ಆಗಬೇಕು. ಬಾಪ್ ದಾದಾರ ಗುಣಗಳನ್ನು ತಮ್ಮಲ್ಲಿ ಧಾರಣೆ ಮಾಡಿಕೊಂಡರೆ ಅದುವೇ ಸ್ನೇಹದ ಕರ್ತವ್ಯ(ರಿಟರ್ನ್) ಆಗಿದೆ. ತಂದೆಯ ಶ್ರೇಷ್ಠತೆ ತಮ್ಮಲ್ಲಿ ಧಾರಣೆ ಮಾಡಿಕೊಳ್ಳಬೇಕು, ಇದಾಗಿದೆ ಸ್ನೇಹ. ಒಂದು ವಿಶೇಷತೆಯಲ್ಲಿಯೂ ಕಡಿಮೆಯಿರಬಾರದು. ಎಲ್ಲಾ ಗುಣಗಳನ್ನು ಯಾವಾಗ ತಮ್ಮಲ್ಲಿ ಧಾರಣೆ ಮಾಡಿಕೊಳ್ಳುವಿರೋ ಆಗ ಭವಿಷ್ಯದಲ್ಲಿ ಸರ್ವಗುಣಸಂಪನ್ನ ದೇವತೆಯಾಗುವಿರಿ. ಸರ್ವಗುಣ ಸಂಪನ್ನರಾಗುವ ಗುರಿಯನ್ನು ಇಟ್ಟುಕೊಳ್ಳಬೇಕು. ತಂದೆಯ ಗುಣಗಳನ್ನು ಮುಂದಿಟ್ಟುಕೊಂಡು ಎಲ್ಲಿಯವರೆಗೆ ಬಂದಿರುವಿರಿ ಎಂದು ತಮ್ಮನ್ನು ಪರಿಶೀಲನೆ ಮಾಡಿಕೊಳ್ಳಿ. ಕಡಿಮೆ ಶಾತವೂ ಇರಬಾರದು. ಇಲ್ಲಿ ಶಾತ ಸಂಪೂರ್ಣವಾಗಿದ್ದರೆ ಅಲ್ಲಿಯೂ ಸಂಬಂಧದಲ್ಲಿ ಸಮೀಪ ಬರುವಿರಿ.

ಈಗ ಆತ್ಮವನ್ನೇ ನೋಡಬೇಕು. ದೇಹವನ್ನು ನೋಡಿ ಬಹಳ ದಣಿದಿರುವಿರಿ ಆದ್ದರಿಂದ ಆತ್ಮವನ್ನು ನೋಡಿ, ದೇಹವನ್ನು ನೋಡುವುದರಿಂದ ಏನು ಸಿಕ್ಕಿತು? ದುಃಖಿಯಾದಿರಿ, ಈಗ ಆತ್ಮ ಆತ್ಮವನ್ನು ನೋಡುವಾಗ ದಾರಿ ಸಿಗುವುದು. ಶೂರವೀರರಾಗಿದ್ದೀರಲ್ಲವೇ? ಅವರ ಲಕ್ಷಣಗಳೇನು? ಅವರಿಗೆ ಯಾವುದೇ ಮಾತುಗಳನ್ನು ಪಾರು ಮಾಡುವುದು ಕಷ್ಟವೆನಿಸುವುದಿಲ್ಲ ಮತ್ತು ಸಮಯವೂ ಬೇಕಾಗಿಲ್ಲ. ಅವರ ಸಮಯ ಸೇವೆಯಲ್ಲಿ ಬಿಟ್ಟು ತಮ್ಮ ವಿಘ್ನಗಳನ್ನು ದೂರ ಮಾಡಲು ಉಪಯೋಗಿಸುವುದಿಲ್ಲ. ಇಂತಹವರನ್ನು ಶೂರವೀರ ಎಂದು ಕರೆಯಲಾಗುತ್ತದೆ. ಈಗಂತೂ ಸಮಯ ಬಹಳ ಮುಂದೆ ಹೋಗಿದೆ. ಈ ಲೆಕ್ಕದಂತೆ ಇಲ್ಲಿಯವರೆಗೆ ಬಾಲ್ಯದ ಮಾತುಗಳಾದವು. ಹೇಗೆ ಚಿಕ್ಕ ಮಕ್ಕಳು ನಾಜೂಕಾಗಿರುತ್ತಾರೆ & ದೊಡ್ಡವರು ಬಹಾದ್ದೂರರಾಗಿರುತ್ತಾರೆ. ಆದ್ದರಿಂದ ಪುರುಷಾರ್ಥದಲ್ಲಿ ಹುಡುಗಾಟಿಕೆ ಬೇಡ, ಈ ರೀತಿ ಬಹಾದ್ದೂರ್ ಆಗಬೇಕು, ಎಂತಹದೇ ಪರಿಸ್ಥಿತಿಯಿರಲಿ, ಏನಾದರಾಗಲಿ,

ವಾಯುಮಂಡಲ ಎಂತಹದೇ ಇರಲಿ ಆದರೆ ನೀವು ದುರ್ಬಲರಾಗಬೇಡಿ, ಅಂತಹವರನ್ನು ಶೂರವೀರ ಎಂದು ಹೇಳಲಾಗುತ್ತದೆ. ಶರೀರದ ದುರ್ಬಲತೆ ಇದ್ದಾಗ ಹವಾಮಾನ, ವಾತಾವರಣದ ಪರಿಣಾಮವಾಗುತ್ತದೆ. ಆರೋಗ್ಯವಂತನಿಗೆ ಪರಿಣಾಮವಾಗುವುದಿಲ್ಲ. ವಾಯುಮಂಡಲದ ಪರಿಣಾಮವೂ ನಾಜೂಕಾಗಿರುವವರಿಗೆ ಆಗುತ್ತದೆ. ವಾಯುಮಂಡಲ ರಚಯಿತನಲ್ಲ ರಚನೆಯಾಗಿದೆ. ರಚಯಿತ ಶ್ರೇಷ್ಠನೋ ಅಥವಾ ರಚನೆಯೋ? (ರಚಯಿತ) ಹಾಗಾದರೆ ರಚಯಿತ ರಚನೆಯ ಅಧೀನವೇಕೆ? ಈಗ ಶೂರವೀರರಾಗುವ ತಮ್ಮ ಸ್ಮೃತಿ ದಿವಸವನ್ನು ನೆನಪಿಟ್ಟುಕೊಳ್ಳಿ ಈ ಸ್ಮೃತಿಯನ್ನು ಮರೆಯಬೇಡಿ, ತಮ್ಮಲ್ಲಿ ತಂದೆಯನ್ನು ನೋಡುವಂತಹ ಮಾದರಿಯಾಗಿ ಹೋಗಿ, ತಾವು ಸಂಪೂರ್ಣತೆಯ ನಕ್ಷೆಯನ್ನು ತೋರಿಸಬೇಕು. ಸಾಹಸವಿದ್ದರೆ ಸಹಯೋಗ ಸಿಗುತ್ತದೆ. ಇಲ್ಲಿ ಬಂದು ಪುರುಷಾರ್ಥದ ಸಡಿಲತೆಯಲ್ಲಿ ತೀವ್ರಗತಿ ಬಂದಿದೆ ಎಂದು ತಿಳಿಯುತ್ತೀರಾ? ಈಗ ಪುರುಷಾರ್ಥದಲ್ಲಿ ಸಡಿಲವಾಗಬೇಡಿ. ಸಂಪೂರ್ಣ ಅಧಿಕಾರ ಪಡೆಯಲು ಸಂಪೂರ್ಣ ಆಹುತಿಯನ್ನೂ ಕೊಡಬೇಕಾಗುತ್ತದೆ. ಯಾವುದೇ ಯಜ್ಞವನ್ನು ರಚನೆ ಮಾಡಿದಾಗ ಅದು ಹೇಗೆ ಸಂಪೂರ್ಣ ಸಫಲವಾಗುತ್ತದೆ? (ಆಹುತಿ ಹಾಕಿದಾಗ), ಒಂದು ವೇಳೆ ಆಹುತಿಯಲ್ಲಿ ಕೊರತೆಯಿದ್ದರೆ  ಯಜ್ಞ ಸಫಲವಾಗುವುದಿಲ್ಲ. ಇಲ್ಲಿಯೂ ಪ್ರತಿಯೊಬ್ಬರೂ ನಾವು ಆಹುತಿಯನ್ನು ಹಾಕಿದ್ದೀವಾ ಎಂದು ನೋಡಿಕೊಳ್ಳಬೇಕು. ಸ್ವಲ್ಪ ಆಹುತಿಯಲ್ಲಿ ಕೊರತೆಯಿದ್ದರೂ ಸಂಪೂರ್ಣ ಸಫಲತೆ ಸಿಗುವುದಿಲ್ಲ. ಆಹುತಿ ಎಷ್ಟೋ ಅಷ್ಟರ ಲೆಕ್ಕ ಉಳಿಯುವುದು. ಲೆಕ್ಕ ಮಾಡುವುದರಲ್ಲಿ ಧರ್ಮರಾಜನೂ ಇದ್ದಾನೆ. ಅವನಿಂದ ಯಾವ ಲೆಕ್ಕವೂ ಉಳಿಯುವುದಿಲ್ಲ. ಆದ್ದರಿಂದ ಏನೆಲ್ಲವನ್ನು ಆಹುತಿಯಲ್ಲಿ ಕೊಡಬೇಕಾಗಿದೆಯೋ ಅದನ್ನು ಸಂಪೂರ್ಣ ಕೊಡಿ ನಂತರ ಸಂಪೂರ್ಣ ಪಡೆಯಿರಿ, ಕೊಡುವುದರಲ್ಲಿ ಸಂಪೂರ್ಣತೆಯಿಲ್ಲದಿದ್ದರೆ ಪಡೆಯುವುದರಲ್ಲಿ ಇರುವುದಿಲ್ಲ. ಎಷ್ಟು ಕೊಡುವಿರೋ ಅಷ್ಟು ಪಡೆಯುವಿರಿ, ಸಫಲತೆ ಯಾವುದರಲ್ಲಿದೆ ಎಂಬುದು ಗೊತ್ತಾದ ಮೇಲೂ ಸಫಲ ಮಾಡುವುದಿಲ್ಲವಾದರೆ ಏನಾಗುವುದು? ಕೊರತೆ ಉಳಿಯುವುದು. ಆದ್ದರಿಂದ ಎಲ್ಲಿಯಾದರೂ ಏನಾದರೂ ಉಳಿಯದಿದೆಯೇ ಎಂದು ಸದಾ ಗಮನವಿಟ್ಟುಕೊಳ್ಳಿ, ಮನ, ವಚನ, ಕರ್ಮದಲ್ಲಿ ಎಲ್ಲಿಯೂ ಏನೂ ಉಳಿಯಬಾರದು. ಯಾವುದೇ ಕಾರ್ಯದ ಸಮಾಪ್ತಿಯ ದಿನದಂದು ನಾಲ್ಕೂ ಕಡೆಗೂ ಏನಾದರೂ ಉಳಿದುಕೊಂಡಿದೆಯೇ ಎಂದು ನೋಡಿಕೊಳ್ಳಲಾಗುತ್ತದೆ. ಅದೇ ರೀತಿ ಈಗಲೂ ಸಮಾಪ್ತಿಯ ಸಮಯವಾಗಿದೆ. ಒಂದು ವೇಳೆ ಏನಾದರೂ ಉಳಿದ್ದಿದ್ದರೆ ಅದು ಉಳಿದೇ ಬಿಡುತ್ತದೆ. ನಂತರ ಸ್ವೀಕಾರವಾಗುವುದಿಲ್ಲ. ಇದನ್ನು ಸಂಪೂರ್ಣ ಆಹುತಿ ಎಂದು ಹೇಳಲಾಗುವುದಿಲ್ಲ. ಆದರಿಂದ ಇಷ್ಟು ಗಮನವನ್ನು ಕೊಡಿ, ಈಗ ಕೊರತೆಯಿರುವ ಸಮಯ ಕಳೆದು ಹೋಯಿತು. ಸಮಯ ಬಹಳ ತೀವ್ರವಾಗಿ ಬರುತ್ತಿದೆ. ಒಂದು ವೇಳೆ ಸಮಯ ತೀವ್ರವಾಗಿ ಹೋದರೆ ಮತ್ತು ಸ್ವಯಂ ಸಡಿಲವಾಗಿದ್ದರೆ ಏನಾಗುವುದು? ಗುರಿ ತಲುಪುವಿರಾ? ಆಗ ಸತ್ಯಯುಗದ ಗುರಿಯ ಬದಲು ತ್ರೇತಾಯುಗಕ್ಕೆ ಹೋಗಬೇಕಾಗುವುದು. ಸಮಯ ಹೇಗೆ ತೀವ್ರವಾಗಿ ಓಡುತ್ತಿದೆಯೋ ಅದೇ ರೀತಿ ಸ್ವಯಂ ಕೂಡ ಓಡಬೇಕು. ಸ್ಥೂಲದಲ್ಲಿಯೂ ಯಾರಿಗಾದರೂ ಗಾಡಿಯಲ್ಲಿ ಹೋಗಬೇಕಾದರೆ ಸಮಯ ನೋಡಬೇಕಾಗುತ್ತದೆ. ಇಲ್ಲವಾದರೆ ಉಳಿದುಬಿಡುತ್ತಾರೆ. ಸಮಯ ಹೋಗುತ್ತದೆ, ಯಾರಿಗಾಗಿಯೂ ನಿಲ್ಲುವುದಿಲ್ಲ, ಈಗ ನಿಧಾನವಾಗಿ ಹೋಗುವ ದಿನಗಳು ಕಳೆದವು. ಓಡುವ ದಿನಗಳೂ ಕಳೆದವು, ಈಗ ಜಿಗಿಯುವ ದಿನಗಳು. ಯಾವುದೇ ಮಾತಿನಲ್ಲಿ ಕೊರತೆಯ ಅನುಭವವಾದಾಗ, ಒಂದು ಕ್ಷಣದಲ್ಲಿ ಪರಿವರ್ತನೆ ಮಾಡಿದರೆ ಅದನ್ನು ಜಿಗಿತ (ಜಂಪ್) ಎನ್ನುವರು. ನೋಡಲು ಎತ್ತರ ಎನಿಸುವುದು ಆದರೆ ಬಹಳ ಸಹಜವಾಗಿದೆ. ಕೇವಲ ನಿಶ್ಚಯ ಮತ್ತು ಸಾಹಸ ಬೇಕು. ನಿಶ್ಚಯವಿರುವವರ ವಿಜಯ ಕಲ್ಪದ ಹಿಂದೆಯೂ ಆಗಿತ್ತು, ಈಗಲೂ ಆಗುವುದು. ಇಷ್ಟು ತಮ್ಮನ್ನು ಪಕ್ಕಾ ಮಾಡಿಕೊಳ್ಳಬೇಕು. ಕ್ಷಣ ಕ್ಷಣವೂ ಮನ, ವಾಣಿ ಮತ್ತು ಕರ್ಮಗಳನ್ನು ನೋಡಿಕೊಳ್ಳಬೇಕು. ಬಾಪ್ಕದಾದಾರಿಗೆ ಇದನ್ನು ನೋಡುವುದು ಕಠಿಣವೇನಲ್ಲ. ನೋಡಲು ಯಾವ ಆಧಾರ ತೆಗೆದುಕೊಳ್ಳುವ ಅವಶ್ಯಕತೆಯೂ ಇಲ್ಲ. ಎಲ್ಲಿಂದಲಾದರೂ ನೋಡಬಹುದು. ಹಳಬರಿಗಿಂತ ಹೊಸಬರಲ್ಲಿ ನಾವು ಮಾಡಿ ತೋರಿಸುವೆವು ಎಂದು ಹೆಚ್ಚು ಉತ್ಸಾಹವಿರುತ್ತದೆ. ಈ ರೀತಿಯ ತೀವ್ರಗತಿಯ ವಿದ್ಯಾರ್ಥಿಗಳು ಇದ್ದಾರೆ. ಹೊಸಬರೇ ಅದ್ಭುತವನ್ನು ಮಾಡಬಲ್ಲರು. ಏಕೆಂದರೆ ಅವರಿಗೆ ಸಮಯವೂ ಸ್ಪಷ್ಟವಾಗಿ ಕಂಡುಬರುತ್ತದೆ. ಸಮಯದ, ಪರಿಸ್ಥಿತಿಗಳ ಸಹಯೋಗವಿದೆ. ಪುರುಷಾರ್ಥವನ್ನು ಹೇಗೆ ಮಾಡಬೇಕೆಂದು ಪರಿಸ್ಥಿತಿಗಳು ತೋರಿಸುತ್ತಿವೆ. ಪರೀಕ್ಷೆಗಳು ಪ್ರಾರಂಭವಾದಾಗ ಪುರುಷಾರ್ಥ ಮಾಡಲಾಗುವುದಿಲ್ಲ. ನಂತರ

ಅಂತಿಮ ಪರೀಕ್ಷೆ ಆರಂಭವಾಗುವುದು. ಪರೀಕ್ಷೆಗೆ ಮೊದಲೇ ತಲುಪಿರುವಿರಿ, ಇದನ್ನೂ ಸಹ ಸರಿಯಾದ ಸಮಯಕ್ಕೆ ತಲುಪುವ ತಮ್ಮ ಸೌಭಾಗ್ಯವೆಂದು ತಿಳಿಯಿರಿ. ಪೇಪರ್ ಬರೆಯಲು ಒಳಗೆ ಹೋಗಬಹುದು. ಪೇಪರ್ ಶುರುವಾದಾಗ ದ್ವಾರವನ್ನು ಮುಚ್ಚಲಾಗುತ್ತದೆ. ಆರಂಭದಲ್ಲಿ ಬಂದವರಿಗೆ ವೈರಾಗ್ಯವನ್ನು ಕೊಡಲಾಗುತ್ತಿತ್ತು. ಇತ್ತೀಚೆಗೆ ಪರಿಸ್ಥಿತಿಗಳೇ ವೈರಾಗ್ಯವನ್ನು ಕೊಡುತ್ತಿವೆ. ತಮಗೆ ಧರಣಿಯನ್ನು ರೂಪಿಸಲು ಸಮಯ ಬೇಕಾಗಿಲ್ಲ. ಕೇವಲ ಜ್ಞಾನವೆಂಬ ನಿಶ್ಚಯದ ಪಕ್ಕಾ ಬೀಜ ಹಾಕಿದ್ದೀರಿ ಮತ್ತು ಫಲ ತಯಾರಾಗುವುದು, ಇಂತಹ ಬೀಜ ಬಹಳ ಬೇಗನೆ ಫಲ ಕೊಡುತ್ತದೆ. ಬೀಜವನ್ನು ಪಾಲನೆ ಮಾಡುವ, ರಕ್ಷಣೆ ಮಾಡುವ ಕಾರ್ಯ ತಮ್ಮದು.

ತಂದೆ ಸರ್ವಶಕ್ತಿವಂತ ಮತ್ತು ಮಕ್ಕಳು ಸಂಕಲ್ಪಗಳನ್ನು ತಡೆಯಲು ಅಶಕ್ತರೇ! ತಂದೆ ಸೃಷ್ಟಿಯನ್ನು ಪರಿವರ್ತಿಸುತ್ತಾರೆ, ಮಕ್ಕಳು ತಮ್ಮನ್ನು ತಾವು ಪರಿವರ್ತಿಸಿಕೊಳ್ಳಲಾರರೇ! ಎಂದರೆ ತಂದೆ ಏನಿದ್ದಾರೆ ಮತ್ತು ನಾವು ಏನಾಗಿದ್ದೇವೆ ಎಂದು ಯೋಚಿಸಿ. ಆಗ ತಮ್ಮ ಮೇಲೆ ತಮಗೆ ನಾಚಿಕೆಯಾಗುವುದು. ತಮ್ಮ ನಡತೆಯನ್ನು ಪರಿವರ್ತಿಸಿಕೊಳ್ಳಬೇಕು. ವಾಣಿಯಿಂದ ಬಹಳ ತಿಳಿಯಲಾರರು ಆದರೆ ಪರಿವರ್ತನೆಯನ್ನು ನೋಡಿ ನಿಮ್ಮನ್ನು ಈ ರೀತಿ ಮಾಡುವವರು ಯಾರು ಎಂದು ತಾವೇ ಕೇಳುವರು, ಯಾರಾದರೂ ಪರಿವರ್ತನೆಯಾಗಿ ತೋರಿಸಿದರೆ ಇಚ್ಛೆಯಿಲ್ಲದಿದ್ದರೂ ಏನಾಯಿತು, ಹೇಗಾಯಿತು ಎಂದು ಅವರನ್ನು ಕೇಳುತ್ತಾರೆ. ಹಾಗಾದರೆ ತಮ್ಮ ನಡತೆಯನ್ನೂ ನೋಡಿ ತಾವೇ ಸೆಳೆಯಲ್ಪಡುತ್ತಾರೆ.

ಇದು ನಿಮಿತ್ತ ಸೇವಾಕೇಂದ್ರವಾಗಿದೆ. ಎಲ್ಲರ ಮುಖ್ಯಕೇಂದ್ರ ಒಂದೇ ಆಗಿದೆ. ಈ ರೀತಿ ಬೇಹದ್ದಿನ ದೃಷ್ಟಿಯಲ್ಲಿರುತ್ತೀರಲ್ಲವೇ? ಮುಖ್ಯ ಕೇಂದ್ರದಿಂದಲೂ ಎಲ್ಲರ ಸಂಬಂಧವಿದೆ. ಎಲ್ಲಾ ಆತ್ಮರ ಸಂಬಂಧವಿದೆ. ಒಬ್ಬನ ಜೊತೆಗೆ ಸಂಬಂಧವಿದ್ದಾಗ ಸ್ಥಿತಿ ಏಕರಸವಾಗಿರುತ್ತದೆ. ಬೇರೆ ಎಲ್ಲಿಯಾದರೂ ಸಂಬಂಧದ ಎಳೆಯಿರುವಾಗ ಏಕರಸ ಸ್ಥಿತಿಯಿರುವುದಿಲ್ಲ. ಆದ್ದರಿಂದ ಏಕರಸ ಸ್ಥಿತಿಯನ್ನು ಮಾಡಿಕೊಳ್ಳಲು ಒಬ್ಬನ ಹೊರತು ಬೇರೆ ಏನನ್ನಾದರೂ ನೋಡಿದರೂ ನೋಡದಂತಿರಿ. ಏನನ್ನು ನೋಡುತ್ತೀರೋ ಆದಾವುದು ಉಳಿಯುವುದಿಲ್ಲ. ಜೊತೆಗಿರುವ ಅವಿನಾಶಿ ವಸ್ತುವೆಂದರೆ ತಂದೆ. ಒಬ್ಬನ ನೆನಪಿನಲ್ಲಿ ಎಲ್ಲಾ ಪ್ರಾಪ್ತಿಯಾಗುತ್ತದೆ ಮತ್ತು ಎಲ್ಲರ ನೆನಪಿನಿಂದ ಏನೂ ಪ್ರಾಪ್ತಿಯಾಗುವುದಿಲ್ಲವಾದರೆ ಯಾವ ವ್ಯಾಪಾರ ಚೆನ್ನಾಗಿದೆ? ನೋಡಿ ವ್ಯಾಪಾರಮಾಡುತ್ತೀರೋ ಅಥವಾ ಹೇಳಿದ್ದನ್ನು ಕೇಳಿ ಮಾಡುತ್ತೀರೋ? ಈ ಮಾಯೆ ಸದಾ ಕಾಲಕ್ಕೆ ವಿದಾಯವನ್ನು ತೆಗೆದುಕೊಳ್ಳಲು ಸ್ವಲ್ಪ ಸಮಯ ಮುಖ ತೋರಿಸುತ್ತದೆ ಎಂದು ತಿಳುವಳಿಕೆ ಸಿಕ್ಕಿದೆ. ಈಗ ಸೋಲಿಸಲು ಅಲ್ಲ, ವಿದಾಯವನ್ನು ಪಡೆಯಲು ಬರುತ್ತದೆ, ಅನುಮತಿಯನ್ನು ಪಡೆಯಲು ಬರುತ್ತಿದೆ. ಒಂದು ವೇಳೆ ಭಯ ಪಟ್ಟರೆ ಅದನ್ನು ದುರ್ಬಲತೆ ಎಂದು ಹೇಳಲಾಗುತ್ತದೆ. ದುರ್ಬಲತೆಯಿಂದ ಮಾಯೆಯ ಆಕ್ರಮಣವಾಗುತ್ತದೆ. ಈಗ ಶಕ್ತಿ ಸಿಕ್ಕಿದೆಯಲ್ಲವೇ? ಸರ್ವಶಕ್ತಿವಂತನ ಜೊತೆಗೆ ಸಂಬಂಧವಿದ್ದರೆ ಅವರ ಶಕ್ತಿಯ ಮುಂದೆ ಮಾಯೆಯ ಶಕ್ತಿ ಏನು? ಸರ್ವಶಕ್ತಿವಂತನ ಮಕ್ಕಳು ಎಂಬ ನಶೆ ಎಂದೂ ಮರೆಯಬಾರದು. ಮರೆಯುವುದರಿಂದಲೇ ಮಾಯೆ ಆಕ್ರಮಣ ಮಾಡುತ್ತದೆ. ಪ್ರಜ್ಞಾಹೀನರಾಗಬಾರದು. ಬುದ್ಧಿವಂತರು ಪ್ರಜ್ಞೆಯುಳ್ಳವರಾಗಿರುತ್ತಾರೆ. ಇತ್ತೀಚೆಗೆ ಕಳ್ಳರು ಸಹ ಏನಾದರೂ ವಸ್ತುವಿನಿಂದ ಪ್ರಜ್ಞಾಹೀನ ಮಾಡುತ್ತಾರೆ. ಅದೇ ರೀತಿ ಮಾಯೆಯೂ ಮಾಡುತ್ತದೆ. ಇವರದು ಈ ವಿಧಿ ಎಂದು ಚತುರರಾಗಿರುವವರು ಮೊದಲೇ ತಿಳಿದುಕೊಳ್ಳುತ್ತಾರೆ, ಆದ್ದರಿಂದ ಮೊದಲೇ ಎಚ್ಚರಿಕೆಯಿಂದ ಇರುತ್ತಾರೆ. ತಮ್ಮ ಪ್ರಜ್ಞೆಯನ್ನು ಕಳೆದುಕೊಳ್ಳುವುದಿಲ್ಲ. ಈ ಸಂಜೀವನಿ ಮೂಲಿಕೆಯನ್ನು ಸದಾ ಜೊತೆಗಿಟ್ಟುಕೊಂಡಿರಿ.

ಒಂದು ತಿಂಗಳಿನಿಂದ ಬರುತ್ತಿರುತ್ತಿದ್ದರೂ ಪರವಾಗಿಲ್ಲ, ಇದೂ ಬಹಳಷ್ಟಾಯಿತು. ಒಂದು ಕ್ಷಣದಲ್ಲಿ ಪರಿವರ್ತನೆಯಾಗಬಹುದು. ನಾವಂತೂ ಈಗ ಬಂದಿರುವೆವು, ಇಲ್ಲಿ ಕ್ಷಣದ ವ್ಯಾಪಾರವಿದೆ, ಎಂದು ತಿಳಿಯಬೇಡಿ. ಒಂದು ಕ್ಷಣದಲ್ಲಿ ಜನ್ಮಸಿದ್ಧ ಅಧಿಕಾರ ಪಡೆಯಬಹುದು. ಆದ್ದರಿಂದ ಈ ರೀತಿಯ ತೀವ್ರ ಪುರುಷಾರ್ಥವನ್ನು ಮಾಡಿ ಎಂಬ ಯುಕ್ತಿ ಸಿಗುತ್ತದೆ. ಯಾವುದೇ ಮಾತು ಎದುರಿಗೆ ಬಂದರೂ ಒಂದು ಕ್ಷಣದಲ್ಲಿ ಪರಿವರ್ತನೆಯಾಗಲಿ ಎಂಬ ಗುರಿಯನ್ನು ಇಟ್ಟುಕೊಳ್ಳಿ. ಇಡೀ ಕಲ್ಪದಲ್ಲಿ ಇದೇ

ಸಮಯವಾಗಿದೆ. ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ ಎಂಬ ಮಂತ್ರವನ್ನು ನೆನಪಿಟ್ಟುಕೊಳ್ಳಿ. ಏನೆಲ್ಲಾ ಹಳೆಯ ಸಂಸ್ಕಾರಗಳಿವೆಯೋ, ಹಳೆಯ ಸ್ವಭಾವ - ಸಂಸ್ಕಾರಗಳಿವೆಯೋ ಬದಲಾಗಿ ಈಶ್ವರೀಯವಾಗಲಿ,ಯಾವುದೇ ಹಳೆಯ ಸಂಸ್ಕಾರ, ಹಳೆಯ ಅಭ್ಯಾಸಗಳು ಇಲ್ಲದಿರಲಿ, ತಮ್ಮ ಪರಿವರ್ತನೆಯಿಂದ ಅನೇಕ ಜನರು ಸಂತುಷ್ಟರಾಗುವರು. ಸದಾ ನಮ್ಮ ನಡತೆಯಿಂದ ಯಾರಿಗೂ ದುಃಖವಾಗದಿರಲಿ ಎಂಬ ಪ್ರಯತ್ನ ಮಾಡಬೇಕು. ನನ್ನ ನಡತೆ, ಸಂಕಲ್ಪ, ವಾಣಿ, ಪ್ರತಿಯೊಂದು ಕರ್ಮ ಸುಖಕರವಾಗಿರಲಿ. ಬ್ರಾಹ್ಮಣ ಕುಲದ ರೀತಿ ಇದಾಗಿದೆ. ಇವರು ನಮ್ಮಂತಹವರಿಂದ ಭಿನ್ನವಾಗಿದ್ದಾರೆ ಎಂದು ದೂರದಿಂದಲೇ ಯಾರಾದರೂ ತಿಳಿದುಕೊಳ್ಳಬೇಕು. ನಿರ್ಲಿಪ್ತ ಮತ್ತು ಪ್ರಿಯರಾಗಿರಬೇಕು ಇದಾಗಿದೆ ಪುರುಷಾರ್ಥ. ಬೇರೆಯವರನ್ನು ಸಹ ಹಾಗೆಯೇ ತಯಾರು ಮಾಡಬೇಕು. ಇದೇ ಲಕ್ಷ್ಯವನ್ನು ಇಟ್ಟುಕೊಳ್ಳಬೇಕು ಯಾರು ಎಷ್ಟು ತಯಾರಾಗುತ್ತಾರೆಯೋ ಅವರು ಅಷ್ಟು ತಯಾರು ಮಾಡುತ್ತಾರೆ. ತಮ್ಮ ಜೀವನದಲ್ಲಿ ಅಲೌಕಿಕತೆ ಅನುಭವಕ್ಕೆ ಬರುತ್ತದೆಯೇ? ಜನರಿಂದ ಭಿನ್ನವಾಗಿದ್ದೇವೆ ಎಂದು ತಮ್ಮನ್ನು ತಿಳಿದುಕೊಳ್ಳುತ್ತೀರಾ ಎಂದು ತಮ್ಮನ್ನು ತಾವು ನೋಡಿಕೊಳ್ಳಬೇಕು. ನೆನಪು ಇರದಿದ್ದರೆ ಬುದ್ಧಿ ಎಲ್ಲಿರುತ್ತದೆ? ಒಂದು ಕಡೆಗೆ ಮರೆತರೆ ಇನ್ನೊಂದು ಕಡೆಗೆ ಜೋಡಿಸಲ್ಪಟ್ಟಿರುತ್ತದೆ ಅಲ್ಲವೇ? ಅವ್ಯಕ್ತ ಸ್ಥಿತಿಯಿಂದ ಕೆಳಗಿಳಿದಾಗ ಯಾವ ವ್ಯಕ್ತದ ಕಡೆಗೆ ಬುದ್ಧಿ ಹೋಗುತ್ತದೆ ಎಂದು ಪರಿಶೀಲನೆ ಮಾಡಿ, ಅವಶ್ಯ ಏನಾದರೂ ಉಳಿದಿರಬಹುದು ಆದ್ದರಿಂದ ಬುದ್ಧಿ ಅಲ್ಲಿಗೆ ಹೋಗುತ್ತಿದೆ. ಬಿಗಿಯಾಗಿ ಹಿಡಿದುಕೊಳ್ಳುವುದರಿಂದ ಎಳೆಯಲ್ಪಡುವಂತಹ ಕೆಲವು ಮಾತುಗಳು ಇವೆ. ಕೆಲವು ಮಾತುಗಳಲ್ಲಿ ಸಡಿಲ ಬಿಡುವುದೇ ಸೆಳೆತವಾಗುತ್ತದೆ. ಗಾಳಿಪಟ ಎತ್ತರಕ್ಕೆ ಹಾರಲು ಸಡಿಲವಾಗಿ ಬಿಡಬೇಕಾಗುತ್ತದೆ. ಈ ರೀತಿ ಆಕರ್ಷಣೆಗೆ ಒಳಗಾಗಬಾರದು ಎಂದಾಗ ಎಲ್ಲಿ ಸಡಿಲ ಬಿಡಬೇಕು ಎಂಬುದನ್ನು ನೋಡಬೇಕಾಗುತ್ತದೆ. ಇದರಿಂದ ಅದು ಸ್ವಯಂ ಸೆಳೆಯಲ್ಪಡುತ್ತದೆ.

ವಿಘ್ನಗಳನ್ನೂ ನಾಶಮಾಡಲು ಯುಕ್ತಿಗಳು ಸದಾ ನೆನಪಿನಲ್ಲಿದ್ದರೆ ಪುರುಷಾರ್ಥದಲ್ಲಿ ಸಡಿಲವಾಗುವುದಿಲ್ಲ. ಯುಕ್ತಿಗಳನ್ನು ಮರೆತಾಗ ಪುರುಷಾರ್ಥದಲ್ಲಿ ಸಡಿಲವಾಗುತ್ತೀರಿ. ಒಂದೊಂದು ಮಾತಿಗಾಗಿ ಎಷ್ಟು ಯುಕ್ತಿಗಳು ಸಿಕ್ಕಿವೆ? ಅನೇಕ ಜನ್ಮ ಪುರುಷಾರ್ಥ ಮಾಡಿದಾಗಲೂ ಎಲ್ಲಿಯೂ ಸಿಗದಂತಹ ಪ್ರಾಪ್ತಿ, ಎಷ್ಟು ದೊಡ್ಡದಿದೆ ಮತ್ತು ದಾರಿ ಎಷ್ಟು ಸರಳವಾಗಿದೆ. ಅದನ್ನು ಒಂದು ಜನ್ಮದ ಸ್ವಲ್ಪ ಸಮಯದಲ್ಲಿ ಪಡೆಯುತ್ತೀದ್ದೀರಿ. ಇಷ್ಟು ನಡೆಯಿರುತ್ತದೆಯಲ್ಲವೇ? "ಇಚ್ಛಾ ಮಾತ್ರಂ ಅವಿದ್ಯಾ" ( ಇಚ್ಛೆಯ ಅವಿದ್ಯೆ) ಇಂತಹ ಸ್ಥಿತಿಯ ಪ್ರಾಪ್ತಿಗಾಗಿ ವಿಧಿಯನ್ನು ಹೇಳಿದೆವು. ಇಷ್ಟು ಶ್ರೇಷ್ಠ ಜ್ಞಾನ ಎಷ್ಟು ಸೂಕ್ಷ್ಮವಾಗಿದೆ. ಜೀವನದಲ್ಲಿ ನಾನು ದೇವತೆ ಆಗಬಲ್ಲೆ ಎಂಬ ಇಷ್ಟು ಉನ್ನತ ಗುರಿಯನ್ನು ಯಾರೂ ಇಟ್ಟುಕೊಳ್ಳಲು ಸಾಧ್ಯವಿಲ್ಲ. ನಾವೇ ದೇವತೆಗಳಾಗಿದ್ದೆವು ಎಂದು ಯಾವಾಗಲಾದರೂ ಯೋಚಿಸಿದ್ದೀರಾ? ಏನನ್ನು ಯೋಚಿಸಿದ್ದಿರಿ ಮತ್ತು ಏನಾಗುತ್ತೀರಿ? ಕೇಳದೆಯೇ ಅಮೂಲ್ಯ ರತ್ನಗಳು ಸಿಗುತ್ತವೆ. ಈ ರೀತಿಯ ಪದಮಾಪದಮ್ ಭಾಗ್ಯಶಾಲಿ ಎಂದು ತಮ್ಮನ್ನು ತಿಳಿಯುತ್ತೀರಾ? ರಾಷ್ಟ್ರಪತಿ ಮುಂತಾದವರು ತಮ್ಮ ಮುಂದೆ ಏನಾಗಿದ್ದಾರೆ? ಇಷ್ಟು ಉನ್ನತ ದೃಷ್ಟಿ, ಇಷ್ಟು ಶ್ರೇಷ್ಠ ಸ್ವಮಾನ ನೆನಪಿರುತ್ತದೆಯೇ ಅಥವಾ ಎಂದಾದರೊಮ್ಮೆ ಮರೆತುಹೋಗುತ್ತದೆಯೇ? ಸ್ಮೃತಿ ವಿಸ್ಮೃತಿಯ ಏಣಿಯನ್ನು ಏರುತ್ತಾ ಇಳಿಯುತ್ತಾ ಇರುತ್ತೀರಾ? ಕೊಳಚೆಯಿಂದ ಸೊಳ್ಳೆಗಳು ಪ್ರಕಟವಾಗುತ್ತವೆ. ಆದ್ದರಿಂದ ಅವುಗಳನ್ನು ದೂರ ಮಾಡಲಾಗುತ್ತದೆ. ಅದೇ ರೀತಿ ತಮ್ಮ ದುರ್ಬಲತೆಗಳಿಗೆ ಮಾಯೆಯ ಕೀಟಗಳು ಹಿಡಿದುಕೊಳ್ಳುತ್ತವೆ. ದುರ್ಬಲತೆಗಳನ್ನು ಬರಲು ಬಿಡದಿದ್ದರೆ ಮಾಯೆ ಬರುವುದಿಲ್ಲ. ಸರ್ವಶಕ್ತಿವಂತನ ಜೊತೆಗೆ ನಮ್ಮ ಸಂಬಂಧವಿದೆ ಎಂಬುದನ್ನು ನೆನಪಿಟ್ಟುಕೊಳ್ಳಿ ಹಾಗಾದರೆ ದುರ್ಬಲತೆ ಏಕೆ? ಸರ್ವಶಕ್ತಿವಂತ ತಂದೆಯ ಮಕ್ಕಳಾದರೂ ಮಾಯೆಯ ಶಕ್ತಿಯನ್ನು ನಾಶ ಮಾಡಲಾರಿರಾ? ನನ್ನ ತಂದೆ ಸರ್ವಶಕ್ತಿವಂತ ಎಂಬ ಒಂದು ಮಾತನ್ನು ಸದಾ ನೆನಪಿಟ್ಟುಕೊಳ್ಳಿ. ಎಲ್ಲರಿಗಿಂತ ಶ್ರೇಷ್ಠ ಸೂರ್ಯವಂಶದವರಾಗಿದ್ದೇವೆ. ನಮ್ಮ ಮೇಲೆ ಮಾಯೆ ಹೇಗೆ ಆಕ್ರಮಣ ಮಾಡಲು ಸಾಧ್ಯ. ತಮ್ಮ ತಂದೆ, ತಮ್ಮ ವಂಶಗಳನ್ನೂ ನೆನಪಿಟ್ಟುಕೊಂಡರೆ ಮಾಯೆ ಏನನ್ನೂ ಮಾಡಲಾರದು. ಸ್ಮೃತಿಸ್ವರೂಪರಾಗಬೇಕು. ಇಷ್ಟು ಜನ್ಮ ವಿಸ್ಮೃತಿಯಲ್ಲಿದ್ದಿರಿ ಆದರೂ ವಿಸ್ಮತಿ ಒಳ್ಳೆಯದೆನಿಸುತ್ತದೆಯೇ? 63 ಜನ್ಮ ವಿಸ್ಮೃತಿಯಲ್ಲಿ ಮೋಸ ಹೋದಿರಿ, ಈಗ ಒಂದು ಜನ್ಮಕ್ಕಾಗಿ ಮೋಸದಿಂದ ರಕ್ಷಿಸಿಕೊಳ್ಳುವುದು ಕಷ್ಟವೆನಿಸುತ್ತದೆಯೇ? ಒಂದು ವೇಳೆ ಬಾರಿ ಬಾರಿ ದುರ್ಬಲರಾಗುತ್ತೀರಿ, ಪರಿಶೀಲನೆ ಮಾಡುವುದಿಲ್ಲವಾದರೆ ಅವರ ಸ್ವಭಾವ –

ಸಂಸ್ಕಾರ ದುರ್ಬಲತೆಯದಾಗುತ್ತದೆ. ಸ್ಥಿತಿಯನ್ನು ಪರಿಶೀಲನೆ ಮಾಡಿ - ತಮ್ಮನ್ನು ಶಕ್ತಿಶಾಲಿ ಮಾಡಿಕೊಳ್ಳಬೇಕು. ದುರ್ಬಲತೆಯನ್ನು ಪರಿವರ್ತಿಸಿ ಶಕ್ತಿಯನ್ನು ತರಬೇಕು.

ಈಗ ಯಾರೆಲ್ಲಾ ಕುಳಿತಿದ್ದೀರೋ ಅವರು ತಮ್ಮನ್ನು ಸೂರ್ಯವಂಶಿ ನಕ್ಷತ್ರವೆಂದು ತಿಳಿಯುತ್ತೀರಾ? ಅವರ ಕರ್ತವ್ಯವೇನು? ಸೂರ್ಯವಂಶದ ನಕ್ಷತ್ರಗಳು ಮಾಯೆಗೆ ಅಧೀನವಾಗುವರೇ? ಎಲ್ಲರೂ ಮಾಯಾಜೀತ್ ಆಗಿರುವಿರಾ? ಆಗಿರುವಿರೋ ಅಥವಾ ಆಗಬೇಕೋ? ಮಾಯಾಜೀತರ ಟೈಟಲ್ ತಾವು ಧಾರಣೆ ಮಾಡಿರುವಿರಾ? ಯುಗಲ್ ನಲ್ಲಿಯೂ ಒಬ್ಬರು ಮಾಯಾಜೀತ್ ಆಗುತ್ತಿದ್ದೇವೆ ಎಂದು ಹೇಳುತ್ತಾರೆ ಮತ್ತು ಇನ್ನೊಬ್ಬರು ಆಗಿದ್ದೇವೆ ಎಂದು ಹೇಳುತ್ತಾರೆ. ಒಂದೇ ಶಿಕ್ಷಣ, ಒಬ್ಬನೇ ಓದಿಸುವವನು ಆದರೂ ಕೆಲವರು ವಿಜಯಿಯಾಗಿರುವರು, ಕೆಲವರು ಆಗುತ್ತಿರುವರು, ಈ ಅಂತರ ಏಕೆ? ಇನ್ನೂವರೆಗೂ ಕೊರತೆಗಳಿದ್ದರೆ ತ್ರೇತಾಯುಗದವರಾಗುತ್ತೀರಿ ಮತ್ತು ಯಾರು ಪುರುಷಾರ್ಥಿಗಳಾಗಿದ್ದಾರೋ ಅವರು ಸತ್ಯಯುಗದವರಾಗುತ್ತಾರೆ. ಮೊದಲಿನಿಂದಲೂ ಪೂರ್ಣ ಅಭ್ಯಾಸವಿದ್ದರೆ ಅದು ಸಹಾಯ ಮಾಡುವುದು. ಇಲ್ಲವಾದರೆ ಸ್ಮೃತಿ, ವಿಸ್ಮೃತಿಯ ಅಭ್ಯಾಸವಿದ್ದರೆ ಅಂತ್ಯದಲ್ಲಿ ವಿಸ್ಮೃತಿಯಾಗಬಹುದು. ಬಹಳ ಸಮಯದ ಸಂಸ್ಕಾರಗಳೇ ಅಂತ್ಯದ ಸ್ಥಿತಿಯಲ್ಲಿರುತ್ತವೆ. ಲೌಕಿಕದಲ್ಲೂ ಯಾರಾದರೂ ಶರೀರ ಬಿಟ್ಟರೆ, ಊಟ-ತಿಂಡಿಯ ಉಡುವ-ತೊಡುವ ಮುಂತಾದ ಯಾವುದಾದರೂ ಸಂಸ್ಕಾರ ಧೃಡವಾಗಿದ್ದರೆ ಕೊನೆಯ ಸಮಯದಲ್ಲಿಯೂ ಆ ಸಂಸ್ಕಾರಗಳು ಮುಂದೆ ಬರುತ್ತವೆ. ಆದ್ದರಿಂದ ಈಗಿನಿಂದಲೇ ಸದಾ ಸ್ಮೃತಿಯ ಸಂಸ್ಕಾರವನ್ನು ಧಾರಣೆ ಮಾಡಿಕೊಳ್ಳಿ, ಅಂತ್ಯದಲ್ಲಿ ಇವೇ ವಿಜಯಿಯಾಗಲು ಸಹಯೋಗಿಗಯಾಗುವವು. ವಿದ್ಯಾರ್ಥಿಗಳು ಬಹಳ ಸಮಯದ ಶಿಕ್ಷಣವನ್ನು ಸರಿಯಾಗಿ ಮಾಡದಿದ್ದರೆ ಪರೀಕ್ಷೆಯನ್ನು ಸರಿಯಾಗಿ ಕೊಡಲಾರರು. ಬಹಳ ಸಮಯದ ಅಭ್ಯಾಸ ಬೇಕು. ಆದ್ದರಿಂದ ಈಗ ಈ ವಿಸ್ಮೃತಿಯ ಅಥವಾ ಸೋಲಿನ ಸಂಸ್ಕಾರಗಳು ನಾಶವಾಗಬೇಕು. ಈಗ ಆ ಸಮಯ ಬಂದಿದೆ ಏಕೆಂದರೆ ಸಾಕಾರ ರೂಪದಲ್ಲಿ ಸಂಪೂರ್ಣತೆಯ ಪ್ರಮಾಣವನ್ನು ನೋಡಿದಿರಿ. ಸಾಕಾರನು ಸಂಪೂರ್ಣತೆಯನ್ನು ಪಡೆದುಕೊಂಡಾಯಿತು, ತಾವು ಯಾವಾಗ ಪಡೆಯುವಿರಿ? ಸಮಯದ ಗಂಟೆ ಬಾರಿಸಿದೆ. ಆದರೂ ಗಂಟೆ ಬಾರಿಸಿದ ಮೇಲೆ ಪುರುಷಾರ್ಥ ಮಾಡಿದರೆ ಏನಾಗುವುದು? ಆಗುವಿರಾ? ಮೊದಲ ಸೀಟಿ ಮೊಳಗಿತು. ಎರಡನೆಯದೂ ಮೊಳಗಿತು. ಮೊದಲನೆಯದು ಸಾಕಾರದಲ್ಲಿ ತಾಯಿಯ ಮತ್ತು ಎರಡನೆಯದು ಸಾಕಾರ ರೂಪದ ಈಗ ಮೂರನೆಯದು ಮೊಳಗಬೇಕಿದೆ. ಎರಡು ಸೀಟಿಗಳು ತಯಾರಿ ಮಾಡಿಕೊಳ್ಳಲು ಮತ್ತು ಮೂರನೇಯದು ಸವಾರಿಯಾಗಲು ಎರಡು ಗಂಟೆ ಎಚ್ಚರಿಸಲು, ಮೂರನೇಯದು ಸವಾರಿಯಾಗಲು, ಮೂರನೇಯದರಲ್ಲಿ ಉಳಿದರೆ ಉಳಿದೇ ಇರುವಿರಿ. ಇಷ್ಟು ಕಡಿಮೆ ಸಮಯವಿದೆ ಹಾಗಾದರೆ ಏನು ಮಾಡುವಿರಿ? ಮೂರನೆಯ ಸೀಟಿಗೆ ಸಂಸ್ಕಾರಗಳನ್ನು ಸಂಕ್ಷಿಪ್ತಗೊಳಿಸಲು ಆರಂಭ ಮಾಡಿದರೆ ಉಳಿದು ಹೋಗುತ್ತೀರಿ. ಪೆಟ್ಟಿಗೆ-ಹಾಸಿಗೆ ಯಾವುದೆಂದು ಹೇಳಿದ್ದೆವಲ್ಲವೇ? ***ವ್ಯರ್ಥ ಸಂಕಲ್ಪ ರೂಪದ ಹಾಸಿಗೆ ಮತ್ತು ಅನೇಕ ಸಮಸ್ಯೆಗಳ ಪೆಟ್ಟಿಗೆ ಎರಡನ್ನೂ ಸಮಾಪ್ತಿ ಮಾಡಬೇಕು.*** ಯಾವಾಗ ಈ ಎರಡನ್ನೂ ಸಂಕ್ಷಿಪ್ತಗೊಳಿಸಿ ತಯಾರಾಗುವಿರೋ ಆಗ ಹೋಗಬಹುದು. ಒಂದು ವೇಳೆ ಏನಾದರೂ ಉಳಿದರೆ ಬುದ್ಧಿಯೋಗ ಅವಶ್ಯವಾಗಿ ಆ ಕಡೆಗೆ ಹೋಗುವುದು. ಆಗ ಸವಾರಿ ಮಾಡಲಾಗುವುದಿಲ್ಲ ಎಂದರೆ ವಿಜಯಿಯಾಗಲಾರಿರಿ. ಈಗ ಏನು ಮಾಡಬೇಕು? ಯಾವಾಗಲಾದರೂ ಮಾಡಿದರಾಯಿತು ಎನ್ನುವಾಗ "ಯಾವಾಗಲಾದರೂ" ಶಬ್ದವನ್ನು ತೆಗೆದುಬಿಡಿ, "ಈಗ" ಎಂಬ ಶಬ್ದವನ್ನು ಧಾರಣೆ ಮಾಡಿ, ಯಾವಾಗಲಾದರೂ ಮಾಡುವೆವು, ನಿಧಾನವಾಗಿ ಮಾಡುವೆವು ಎಂದು ಯೋಚಿಸುವವರು ದೂರದಲ್ಲಿಯೇ ಉಳಿಯುತ್ತಾರೆ. ಇಂತಹ ಸಮಯ ಈಗ ಬಂದುಬಿಟ್ಟಿದೆ. ಆದ್ದರಿಂದ ನಂತರ ಯಾರೂ ದೂರು ಕೊಡಬಾರದೆಂದು ಬಾಪ್ ದಾದಾ ಹೇಳುತ್ತಿದ್ದಾರೆ. ಸಮಯಕ್ಕೂ ಗೌರವ ಕೊಡಬೇಕು. ಸಮಯವನ್ನು ಅಧಾರವಾಗಿಟ್ಟುಕೊಂಡರೆ ಯಾವ ಪ್ರಾಪ್ತಿಯೂ ಆಗುವುದಿಲ್ಲ. ***ಸಮಯಕ್ಕಿಂತ ಮೊದಲೇ ಪರಿವರ್ತನೆಯಾದರೆ ತಾವು ಮಾಡಿದ್ದಕ್ಕೆ ಫಲ ಸಿಗುವುದು. ಏನು ಮಾಡಿದಿರೋ ಅದನ್ನು ಪಡೆಯುವಿರಿ, ಸಮಯಕ್ಕನುಸಾರವಾಗಿ ಮಾಡಿದರೆ, ಅದು ಸಮಯದ (ಕಮಾಲ್) ಕಾರ್ಯವಾಯಿತು, ತಮ್ಮ ಪರಿಶ್ರಮವಿರಬೇಕು.***

ತಂದೆಗೆ ಮಕ್ಕಳೊಂದಿಗೆ ಸ್ನೇಹವಿದೆ. ಸ್ನೇಹದ ಚಿಹ್ನೆ ಸಂಪೂರ್ಣವಾಗುವುದು, ನಡೆಯುತ್ತೀದ್ದೀರಿ ಆದರೆ ವೇಗವನ್ನೂ ನೋಡಬೇಕು, ಈಗ ಸಂಪೂರ್ಣತೆಯ ಲಕ್ಷ್ಯವನ್ನಿಟ್ಟುಕೊಳ್ಳಿ, ಆಗ ಸಂಪೂರ್ಣ ರಾಜ್ಯದಲ್ಲಿ ಬರುವಿರಿ, ಯಾವುದೇ ಕೊರತೆಯಿದ್ದರೆ ಸಂಪೂರ್ಣ ರಾಜ್ಯ ಪಡೆಯುವುದಿಲ್ಲ. ಎಷ್ಟು ಹೆಚ್ಚು ಪ್ರಜೆಗಳನ್ನು ಮಾಡಿಕೊಳ್ಳುವಿರೋ ಅಷ್ಟು ಸಮೀಪ ಬರುವಿರಿ, ದೂರದವರು ದೂರದಿಂದಲೇ ನೋಡಲು ಬರುವರು. ಸಮೀಪದವರು ಪ್ರತಿಯೊಂದು ಕಾರ್ಯದಲ್ಲಿ ಜೊತೆಗಿರುವರು, ಶಕ್ತಿಯರು ನಂಬರವನ್ ಆಗಿದ್ದಾರೆಯೇ ಅಥವಾ ಪಾಂಡವರೋ? ಬೇರೆಯವರನ್ನು ಮುಂದುವರೆಸುವುದು ಎಂದರೆ ಸ್ವಯಂ ಮುಂದುವರೆಯುವುದು, ಮುಂದುವರೆಯುವವರ ಹೆಸರು ಪ್ರಸಿದ್ಧವಾಗುವುದಲ್ಲವೇ? ಮಧ್ಯಮಧ್ಯದಲ್ಲಿ ಪರಿಶೀಲನೆ ಮಾಡಿಕೊಳ್ಳಬೇಕು. ***ಪ್ರತಿಯೊಂದು ಕಾರ್ಯವನ್ನು ಮಾಡುವ ಮೊದಲು ಮತ್ತು ನಂತರ ಪರಿಶೀಲನೆ ಮಾಡಿ, ಕಾರ್ಯವನ್ನು ಆರಂಭಿಸುವಾಗ ಅದೇ ಸ್ಥಿತಿಯಲ್ಲಿದ್ದು ಕಾರ್ಯವನ್ನು ಆರಂಭಿಸುತ್ತಿದ್ದೇನೆಯೇ? ನಂತರ ಮಧ್ಯದಲ್ಲಿಯೂ ಎಷ್ಟು ಸಮಯ ನೆನಪಿನಲ್ಲಿ ಇದ್ದೆ ಎಂದು ಪರಿಶೀಲನೆ ಮಾಡುತ್ತಾ ಇರಿ, ಕಾರ್ಯದ ಮೊದಲು ಪರಿಶೀಲನೆ ಮಾಡುವುದರಿಂದ ಆ ಕೆಲಸ ಸಫಲವಾಗುವುದು ಮತ್ತು ಸ್ಥಿತಿಯೂ ಏಕರಸವಾಗಿರುವುದು. ಕೇವಲ ರಾತ್ರಿ ಚಾರ್ಟ್ ಪರಿಶೀಲನೆ ಮಾಡಿದರೆ ಇಡೀ ದಿನ ಹಾಗೆಯೇ ಕಳೆದು ಹೋಯಿತು.*** ಆದರೆ ಪ್ರತಿಯೊಂದು ಕರ್ಮದ ಪ್ರತಿಗಂಟೆಯಲ್ಲಿ ಪರಿಶೀಲನೆ ಮಾಡಬೇಕು. ಅಭ್ಯಾಸವಾದಾಗ ಅದು ಅವಿನಾಶಿಯಾಗುವುದು. ಸಾಹಸ ಇಟ್ಟುಕೊಳ್ಳುವುದರಿಂದ ಸಹಜವಾಗುವುದು. ಕಷ್ಟವೆಂದು ತಿಳಿದರೆ ಕಷ್ಟ ಎಂದು ಅನುಭವವಾಗುವುದು. ತಮ್ಮ ಪುರುಷಾರ್ಥವನ್ನು ಯಾವಾಗ ತೀವ್ರ ಮಾಡುವಿರಿ, ಈಗ ಸಮಯವೆಲ್ಲಿದೆ.

ಇಡೀ ಕಲ್ಪದ ಭಾಗ್ಯವನ್ನು ಈ ಸಮಯವೇ ತಯಾರು ಮಾಡಿಕೊಳ್ಳಬೇಕು. ಈ ರೀತಿ ಗಮನಕೊಟ್ಟು ನಡೆಯಬೇಕು. ಇಡೀ ಕಲ್ಪದ ಭಾಗ್ಯವನ್ನು ತಯಾರುಮಾಡಿಕೊಳ್ಳುವ ಸಮಯ ಇದಾಗಿದೆ. ಸಮಯವನ್ನು ಅಮೂಲ್ಯವೆಂದು ತಿಳಿದು ಪ್ರಯೋಗ ಮಾಡಿ ಆಗ ಸಂಪೂರ್ಣರಾಗುವಿರಿ. ಒಂದು ಕ್ಷಣದಲ್ಲಿ ಪದಮದಷ್ಟು ಸಂಪಾದನೆ ಮಾಡಿಕೊಳ್ಳಬೇಕು. ಒಂದು ಕ್ಷಣದಲ್ಲಿ ಕಳೆದುಕೊಂಡರೆ ಪದಮದಷ್ಟು ಸಂಪಾದನೆಯನ್ನು ಕಳೆದುಕೊಂಡಿರಿ. ಇಷ್ಟು ಎಚ್ಚರಿಕೆಯಿದ್ದರೆ ವಿಜಯಿಯಾಗುವಿರಿ. ಒಂದು ಕ್ಷಣವೂ ವ್ಯರ್ಥ ಕಳೆಯಬಾರದು. ಸಂಗಮಯುಗದ ಒಂದು ಕ್ಷಣವೂ ಸಹ ಬಹಳ ದೊಡ್ಡದು. ಒಂದು ಕ್ಷಣದಲ್ಲಿಯೇ ಏನಿದ್ದವರು ಏನಾಗುತ್ತೀರಿ ಎಂಬ ಲೆಕ್ಕವನ್ನು ಇಡಬೇಕು. ಒಳ್ಳೆಯದು.

ಅವ್ಯಕ್ತ ಮುರಳಿ 25-01-1970.

***ಸ್ಮೃತಿ ಚಿಹ್ನೆಯನ್ನು ಶಾಶ್ವತ ಮಾಡಿಕೊಳ್ಳುವ ವಿಧಿ***

ಸಂಗಮ ಯುಗದಲ್ಲಿ ಸರ್ವ ಗುಣಗಳನ್ನು ಧಾರಣೆ ಮಾಡಿದಾಗಲೇ ಅಲ್ಲಿ(ಸತ್ಯಯುಗದಲ್ಲಿ) ಸಂಪೂರ್ಣ ಸಂಪನ್ನ ದೇವತೆಯಾಗುವಿರಿ, ಎಂದು ತಿಳಿಸುತ್ತಾ ಶಿವ ತಂದೆ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅವ್ಯಕ್ತ ಸ್ಥಿತಿಯಲ್ಲಿ ಇದ್ದು ಕರ್ಮವನ್ನು ಆಚರಿಸಿ, ಬುದ್ಧಿ ಲೈನನ್ನು ಸ್ಪಷ್ಟವಾಗಿಟ್ಟುಕೊಂಡು ಗುರಿಯನ್ನು ತಲುಪಿದ್ದೇನೆ.

2. ನಾನು ಎಂದಾದರೂ, ಎಲ್ಲಿಗಾದರೂ ಹೋದಾಗ ನನ್ನ ಸ್ಮೃತಿ ಚಿನ್ಹೆಯನ್ನು ಸ್ಥಿರವಾಗಿ ಇಟ್ಟುಕೊಂಡಿದ್ದೇನೆ.

3. ನಾನು ಆತ್ಮಿಕ ಸ್ನೇಹದ ಉಡುಗೊರೆಯನ್ನು ಪಡೆದು, ಬಾಪ್ ದಾದಾರವರ ಗುಣಗಳನ್ನು ಸ್ವಯಂನಲ್ಲಿ ಧಾರಣೆ ಮಾಡಿ, ಕರ್ತವ್ಯವನ್ನು ನಿರ್ವಹಿಸಿದ್ದೇನೆ.

4. ನಾನು ಸರ್ವ ಗುಣಗಳನ್ನು ಧಾರಣೆ ಮಾಡಿರುವ ಭವಿಷ್ಯ ಸರ್ವಗುಣ ಸಂಪನ್ನ ದೇವತೆ.

5. ನಾನು ನನ್ನ ಪೂರ್ತಿ ಸಮಯವನ್ನು ಸೇವೆಯಲ್ಲಿ ಉಪಯೋಗಿಸಿ, ನನ್ನ ಪ್ರಭಾವವನ್ನು ವಾಯುಮಂಡಲದ ಮೇಲೆ ಹಾಕುವ ರಚಯಿತನು ಮತ್ತು ಶೂರ ವೀರನು.

6. ನಾನು ಸಂಪೂರ್ಣ ಆಹುತಿ ಮಾಡಿ ಸಂಪೂರ್ಣವಾಗಿ ತಯಾರಾಗಿದ್ದೇನೆ.

7. ನಾನು ಸಮಯಕ್ಕಿಂತ ಮೊದಲೇ ಸಂಪೂರ್ಣ ಆಹುತಿಯನ್ನು ಸಲ್ಲಿಸಿದ್ದೇನೆ.

8. ನಾನು ನಿಶ್ಚಯ ಮತ್ತು ಸಾಹಸದಿಂದ ನನ್ನಲ್ಲಿರುವ ಲೋಪಗಳನ್ನು ಒಂದೇ ಕ್ಷಣದಲ್ಲಿ ಪರಿವರ್ತಿಸಿಕೊಂಡು ಹೈಜಂಪ್ ಮಾಡಿರುವ ವಿಜಯೀರತ್ನ.

9. ನಾನು ಪರೀಕ್ಷೆಗೆ ಮೊದಲೇ ತಂದೆಯ ಬಳಿ ಸೇರಿಕೊಂಡಿರುವ ಸೌಭಾಗ್ಯಶಾಲಿ.

10. ನಾನು ಜ್ಞಾನದ ಮೇಲೆ ನಿಶ್ಚಯವೆಂಬ ಬೀಜವನ್ನು ಹಾಕಿ ಅದನ್ನು ಪಾಲನೆ ಮತ್ತು ರಕ್ಷಣೆ ಮಾಡಿದ್ದೇನೆ.

11. ನಾನು ನನ್ನ ನಡತೆಯಿಂದ ಇತರರನ್ನು ತಂದೆಗೆ ಆಕರ್ಷಣೆಯಾಗುವ ಹಾಗೆ ಮಾಡುವ ಪರಿವರ್ತನಾ ಸ್ವರೂಪ.

12. ನಾನು ಒಬ್ಬ ಪರಮಾತ್ಮನೊಂದಿಗೆ ಸರ್ವ ಸಂಬಂಧಗಳನ್ನು ಜೋಡಿಸಿ ಏಕ ರಸವಾಗಿ ತಯಾರಾಗಿರುವ ಸರ್ವಪ್ರಾಪ್ತಿ ಸ್ವರೂಪ.

13. ನಾನು ಸದಾ ಸರ್ವಶಕ್ತಿವಂತನನ್ನು (ಸಂಜೀವಿನಿ ಮೂಲಿಕೆ) ಮತ್ತು ನನ್ನ ಸೂರ್ಯವಂಶವನ್ನು ಸ್ಮೃತಿಯಲ್ಲಿಟ್ಟು ಮಾಯೆಗೆ ವಿದಾಯವನ್ನು ಕೊಟ್ಟಿದ್ದೇನೆ.

14. ನಾನು "ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ" ಎಂಬ ಮಂತ್ರದಿಂದ ತೀವ್ರ ಪುರುಷಾರ್ಥವನ್ನು ಮಾಡಿ, ಒಂದು ಕ್ಷಣದಲ್ಲಿ ಜನ್ಮಸಿದ್ಧ ಅಧಿಕಾರವನ್ನು ಪಡೆದಿದ್ದೇನೆ.

15. ನನ್ನ ಹಳೆಯ ಸಂಸ್ಕಾರಗಳನ್ನು ಈಶ್ವರೀಯ ಸಂಸ್ಕಾರಗಳಾಗಿ ಪರಿವರ್ತಿಸಿಕೊಂಡು ಎಲ್ಲರಿಗೂ ಸಂತುಷ್ಟತೆಯನ್ನು ಕೊಟ್ಟಿದ್ದೇನೆ

16. ನಾನು ಬ್ರಾಹ್ಮಣ ಕುಲದ ವಿಧಾನ, ಆಚಾರಗಳನ್ನು ಪಾಲಿಸಿದ್ದೇನೆ. ಅರ್ಥಾಥ್ ನನ್ನ ನಡತೆ, ಸಂಕಲ್ಪ, ಮಾತು, ಪ್ರತಿಯೊಂದು ಕರ್ಮ ಸುಖಕರವಾಗಿ ಇವೆ.

17. ನಾನು ಅತೀತ ಮತ್ತು ಪ್ರಿಯವಾಗಿ ತಯಾರಾಗಿ ಇತರರನ್ನು ಹಾಗೆಯೇ ತಯಾರು ಮಾಡಿದ್ದೇನೆ.

18. ನಾನು ಸದಾ ಶ್ರೇಷ್ಠ ಸ್ವಮಾನದ ಸ್ಮೃತಿಯಲ್ಲಿ ಇರುತ್ತಾ ಪುರುಷಾರ್ಥದಲ್ಲಿ ದೌರ್ಬಲ್ಯಗಳನ್ನು ಸಮಾಪ್ತಿ ಮಾಡಿದ್ದೇನೆ.

19. ನಾನು ದೇವತೆಯಾಗುತ್ತೇನೆ ಎಂಬ ಗುರಿಯನ್ನು ಇಟ್ಟುಕೊಂಡ ಪದಮಾ ಪದಂ ಭಾಗ್ಯಶಾಲಿ.

20. ನಾನು ಮಾಯಾಜೀತ್ ಟೈಟಲ್ ಅನ್ನು ಧಾರಣೆ ಮಾಡಿ ಸತ್ಯಯುಗದಲ್ಲಿ ಬರುವ ವಿಜಯೀ ಸ್ವರೂಪ.

21. ನಾನು ಬಹಳ ಸಮಯದ ಅಭ್ಯಾಸದಿಂದ ಸಂಪೂರ್ಣತೆಯನ್ನು ಸಂಸ್ಕಾರವಾಗಿಸಿಕೊಂಡು ಅಂತಿಮಸ್ಥಿತಿಗೆ ತಲುಪಿದ್ದೇನೆ.

22. ನಾನು ವ್ಯರ್ಥ ಸಂಕಲ್ಪ ಎಂಬ ಹಾಸಿಗೆ ಮತ್ತು ಸಮಸ್ಯೆ ಎಂಬ ಪೆಟ್ಟಿಗೆ ಎರಡನ್ನು ಸಂಕ್ಷಿಪ್ತಗೊಳಿಸಿ ಮನೆಗೆ ಹೋಗಲು ತಯಾರಾಗಿ ಇದ್ದೇನೆ.

23. ನಾನು ಸಮಯಕ್ಕಿಂತ ಮೊದಲೇ ಸಂಪೂರ್ಣ ಫಲವನ್ನು ಪಡೆದಿದ್ದೇನೆ. (ಸಮಯದ ಅನುಸಾರ ಪರಿವರ್ತನೆ ಆದರೆ ಸಮಯಕ್ಕೆ ಅಂಕಗಳು ಸಿಗುತ್ತವೆ ನಮಗಲ್ಲ)

24. ನಾನು ಸದಾ ನನ್ನ ಸ್ಥಿತಿಯನ್ನು ಪರಿಶೀಲಿಸಿಕೊಂಡು ಪ್ರತಿಯೊಂದು ಕಾರ್ಯದಲ್ಲಿ ಸಫಲತೆಯನ್ನು ಪಡೆದಿದ್ದೇನೆ ಮತ್ತು ಏಕರಸವಾಗಿ ತಯಾರಾಗಿದ್ದೇನೆ.

25. ನಾನು ಸಂಗಮ ಯುಗದ ಪ್ರತಿ ಕ್ಷಣ ಸಫಲ ಮಾಡಿಕೊಂಡು ಇಡೀ ಕಲ್ಪದ ಅದೃಷ್ಟವನ್ನು ತಯಾರಿಸಿಕೊಂಡಿದ್ದೇನೆ.